09 ಶ್ರೀ ರುದ್ರೇಶಗೌಡ ವೈ.ಎನ್.(ವಿಧಾನಸಭಾ ಸದಸ್ಯರು)
ಆರ್. ಅಶೋಕ್(ಸಾರಿಗೆ ಸಚಿವರು)

ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಇಲ್ಲದಿರುವುದು ನಿಜವಲ್ಲವೇ;

ಹೌದು,

ಆ) ಹಾಗಿದ್ದಲ್ಲಿ ಮಂಜೂರಾತಿ ನೀಡದಿರಲು ಕಾರಣಗಳೇನು;

ಬೇಲೂರಿನಲ್ಲಿ ಬಸ್ ಘಟಕ ನಿರ್ಮಾಣಕ್ಕಾಗಿ ಸೂಕ್ತ ನಿವೇಶನವನ್ನು ಪಡೆಯಲು ನೀರಾವರಿ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆ. ಸೂಕ್ತ ನಿವೇಶನವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಶಕ್ಕೆ ಬಂದ ನಂತರ ಬಸ್ ಘಟಕ ನಿರ್ಮಿಸಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಹಾಗಿಲ್ಲದಿದ್ದಲ್ಲಿ, ಬೇಲೂರು ತಾಲ್ಲೂಕಿನ ನಾಗರೀಕರಿಗೆ ಹಾಗೂ ಪ್ರವಾಸಿಗರಿಗೆ ಬಸ್ಸಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ.

ಈ) ಹಾಗಿದ್ದಲ್ಲಿ, ಬಸ್ ಡಿಪೋ ಎಂದಿನಿಂದ ತೆರೆಯಲಾಗುವುದು?

ಸೂಕ್ತ ನಿವೇಶನವು ನಿಗಮದ ವಶಕ್ಕೆ ಬಂದ ನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಮತ್ತು ಅವಶ್ಯಕತೆಗನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

62 ಶ್ರೀ ಪಾಟೀಲ್ ಎ.ಎಸ್.(ನಡಹಳ್ಳಿ) (ದೇವರ ಹಿಪ್ಪರಗಿ)
ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು)

ಅ) ಬಿಜಾಪುರ ಜಿಲ್ಲೆಗೆ ಲೋಕೋಪಯೋಗಿ ಇಲಾಖೆಯಿಂದ ಯಾವ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ವಿವಿಧ ಯೋಜನೆಯ ಕಾಮಗಾರಿಗಳಿಗೆ ಕಳೆದ 3 ವರ್ಷಗಳಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು?

ಬಿಜಾಪುರ ಜಿಲ್ಲೆಗೆ ಲೋಕೋಪಯೋಗಿ ಇಲಾಖೆಯಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ಕಳೆದ 3ವರ್ಷಗಳಿಂದ ಬಿಡುಗಡೆಯಾಗಿರುವ ವಿಧಾನ ಸಭಾ ಕ್ಷೇತ್ರಾವಾರು ಅನುದಾನ ವಿವರಗಳನ್ನು ಅನುಬಂಧ–1ರಲ್ಲಿ ಅಡಕಗೊಳಿಸಿದೆ.

ಆ) ಈ ಕಾಮಗಾರಿಗಳು ಯಾವ ಹಂತದಲ್ಲಿವೆ?

2005–06 ಮತ್ತು 2006–07ನೇ ಸಾಲಿನ ಕಾಮಗಾರಿಗಳು ಪೂರ್ಣಗೊಂಡಿದ್ದು, 2007–08ನೇ ಸಾಲಿನ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಇ) ದೇವರ ಹಿಪ್ಪರಗಿ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆಗಳ ಅಭಿವೃದ್ಧಿಗೋಸ್ಕರ ಬಂದಿರುವ ಪ್ರಸ್ತಾವನೆಗಳೆಷ್ಟು?